ಗಮನವೆಲ್ಲ ಪ್ರಿಯಾಳ ಮೇಲೆ. ಅವಳಿಂದ ಮಾತು ಹೊರಡುತ್ತಿರಲಿಲ್ಲ. ಅವಳ ಮೇಲೆ ಆಕ್ರಮಣ ಮಾಡಿದವನು ಬಾಗಿಲಿಗೆ ಅಡ್ಡವಾಗಿ ನಿಂತಿದ್ದ ಸರಸೂಳನ್ನು ತಳ್ಳಿ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದ. ಸರಸೂ ಅವನಿಗೆ ಇಂತಿಷ್ಟೂ ಅವಕಾಶ ಕೊಡದೆ ಜೋರಾಗಿ 'ಹಲ್ಕಾ ಬಡ್ಡೀ ಮಗನೇ' ಎಂದು ಕೂಗಿ ಕೋಲಿನಿಂದ ತಲೆಗೆ ಹೊಡೆದಳು. ಅವನು ಕೆಳಗುರುಳಿದ್ದಷ್ಟೇ ಅವಳಿಗೆ ಗೊತ್ತು. ಅವಳೂ ಕುಸಿದಿದ್ದಳು.

ಜರುಗಿದ ಘಟನೆಯ ಶಾಕ್‌ನಿಂದ ಸಾವರಿಸಿಕೊಂಡು ಸುಸ್ಥಿತಿಗೆ ಬಂದು ಕಣ್ಣು ಬಿಟ್ಟಾಗ ಅವಳಿಗೆ ತನ್ನ ಮನೆಯಲ್ಲೇ ಮಲಗಿಸಿರುವುದು ತಿಳಿಯಿತು. ಅಷ್ಟು ದೂರದಲ್ಲಿ ನಾಗೇಂದ್ರ ಗಂಭೀರವಾಗಿ ಕುಳಿತಿದ್ದವನು ಹತ್ತಿರಕ್ಕೆ ಬಂದು ಕೈ ಮುಟ್ಟಿದ. 'ಆಂಟೀ' ಎಂದವನು ಕರೆಯುತ್ತಿದ್ದಂತೆ ಪಕ್ಕದ ಮನೆಯಾಕೆ ಸೀತಮ್ಮ ಎಬ್ಬಿಸಿ ಕೂಡಿಸಿದಳು. ಇನ್ನೊಬ್ಬಾಕೆ ನೀರಿನ ಲೋಟ ತಂದು ಕೊಟ್ಟಳು.

ಹೊರಗೀಗ ಚುಮು ಚುಮು ಬೆಳಕು. ರಾತ್ರಿ ಸರಿದು ಹೋಗಿರಬೇಕು ಎನಿಸಿತವಳಿಗೆ. ತನ್ನ ಪರಿಸ್ಥಿತಿಗೆ ಏನು ಕಾರಣವಿರಬಹುದು ಎನ್ನುವುದು ತಿಳಿಯದಿದ್ದರೂ ಘಟನೆಯ ವಿವರಗಳು ಕಣ್ಣ ಮುಂದೆ ಮತ್ತೆ ರೋಲ್ ಮಾಡಿ ಬಿಟ್ಟ ಹಾಗೆ ಕಾಣಿಸುವುದಕ್ಕೆ ಪ್ರಾರಂಭಿಸಿದಾಗ ಬಿಕ್ಕಿಬಿಕ್ಕಿ ಅಳುವುದಕ್ಕೆ ಶುರು ಮಾಡಿ 'ಪ್ರಿಯಾ ಹೇಗಿದಾಳೆ' ಎಂದು ಪಕ್ಕದಲ್ಲಿದ್ದವರಿಗೆ ಕೇಳಿದಳು. 'ಅಂಥ ಅನಾಹುತವೇನೂ ಆಗಿಲ್ಲವಂತೆ' ಎಂದು ಪ್ರಾಥಮಿಕ ಪರೀಕ್ಷೆಯಲ್ಲಿ ಡಾಕ್ಟರು ಹೇಳಿದ್ದನ್ನು ತಿಳಿಸಿದಳು ಸೀತಮ್ಮ. ಅವಳು ಸಮಾಧಾನದ ನಿಟ್ಟುಸಿರು ಬಿಡುತ್ತಿದ್ದಂತೆ ಮನಸ್ಸಿನಲ್ಲಿ ಹರ್ಷದಲೆಗಳು ಸಾಗಿ ಮೈಯಲ್ಲಿ ಚೈತನ್ಯದ ಚಿಗುರು ಮೂಡಿದವು. ಉಳಿದ ವಿಷಯಗಳ ಬಗ್ಗೆ ವಿವರಗಳನ್ನು ತಿಳಿಯುವ ಕುತೂಹಲದ ಮುನ್ಸೂಚನೆಯಂತೆ, 'ಆ ದರಿದ್ರದವನದೇನು?'ಎಂದಳು.

'ಏನೇನಾಗಬೇಕೋ ಎಲ್ಲಾ ಆಗಿದೆ.'

'ಅಂದ್ರೆ?'

ಸರಸೂ ಕೂಗು ಕೇಳಿ ಸುತ್ತಮುತ್ತಲ ಮನೆಯ ನಾಲ್ಕೈದು ಗಂಡಸರು ಒಬ್ಬರ ಹಿಂದೊಬ್ಬರು ಓಡಿ ಹೋದಾಗ ಪರಿಸ್ಥಿತಿಯ ಸೂಕ್ಷ್ಮತೆ ಗೊತ್ತಾಗಿ ತಕ್ಷಣವೇ ಅಗತ್ಯ ಕ್ರಮ ತೆಗೆದುಕೊಂಡಿದ್ದನ್ನು ತಿಳಿಸಿದಳು. ಅತ್ಯಾಚಾರದ ಪ್ರಯತ್ನದ ವಿಷಯ ತೀರ ಗಂಭೀರವಾದದ್ದರಿಂದ ಪೊಲೀಸರು ಕೂಡಲೇ ಬಂದು ಒಂದಷ್ಟು ಫೋಟೊಗಳನ್ನು ತೆಗೆದು, ಅದೇನೇನೋ ಬರೆದುಕೊಳ್ಳುತ್ತಿರುವಂತೆಯೇ ಪ್ರಿಯಾಳನ್ನು ಆಸ್ಪತ್ರೆಗೆ ಸಾಗಿಸಿ, ಅವನನ್ನು ಇದ್ದ ಸ್ಥಿತಿಯಲ್ಲಿಯೇ ಎಳೆದೊಯ್ದದ್ದನ್ನು ಹೇಳಿದರು. ಇವೆಲ್ಲದರ ನಡುವೆ ಶಾರದಮ್ಮ ಹೋಗಿದ್ದ ಮದುವೆ ಮನೆ ಸ್ಥಳದ ವಿವರ ತಿಳಿದು ಆಕೆಯನ್ನು ಕರೆದು ತಂದದ್ದನ್ನು ಹೇಳುತ್ತಿದ್ದಂತೆಯೇ ಆಕೆ, 'ಸರಸೂ' ಎನ್ನುತ್ತ ಒಳಗೆ ಬಂದು, 'ನನ್ನ ಮಗಳನ್ನು ಉಳಿಸಿದ್ದೀಯಮ್ಮ. ನೀನೇ ಅವಳ ನಿಜವಾದ ತಾಯಿ' ಎಂದು ಮುಂದುವರಿಸಲಾಗದೇ ಅಪ್ಪಿದಳು.

ಇನ್ನಷ್ಟು ಬೆಳಕಾಗುತ್ತಿದ್ದಂತೆ ಸರಸೂ ಇರುವ ರಸ್ತೆ, ಹಿಂದುಮುಂದಿನ ರಸ್ತೆಗಳಲ್ಲಿ ಜನರ ದೈನಂದಿನ ಚಟುವಟಿಕೆಗಳ ನಡುವೆ ಅತಿವೇಗವಾಗಿ ಒಬ್ಬರಿಂದೊಬ್ಬರಿಗೆ ಸುದ್ದಿ ಹರಡಿತು. ವಾಹನಗಳ ಸಂಚಾರಕ್ಕೆ ಅಡಚಣೆಯಾಗುವುದೇನೋ ಎನಿಸುವಷ್ಟು ವಿವಿಧ ವಯೋಮಾನದವರು ವಿಚಾರಿಸುವ ಸಲುವಾಗಿ ಬರಲು ಪ್ರಾರಂಭವಾಯಿತು. ಬಂದವರು ಸರಸೂ ಮತ್ತು ಶಾರದಮ್ಮನ ಮನೆಯವರ ಮೂಲಕ ದೊರೆತ ಸಾಕಷ್ಟು ವಿವರಗಳ ಜೊತೆ